ಶ್ರೀ.ಕೆ.ಎಸ್.ಬೀಳಗಿ (ಸಾರಿಗೆ ಸಚಿವರು) :

ಅ. ಹೊಸ ಬಸ್ ನಿಲ್ದಾಣದಿಂದ ಕಾರ್ಯಾಚರಣೆಗೆ ಒಳಪಡಿಸಲಾಗುತ್ತಿರುವ 200 ಸಾರಿಗೆಗಳಿಗೆ ಹಳೆಯ ಬಸ್ ನಿಲ್ದಾಣದ ಬಳಿ ನಿಲುಗಡೆ ಒದಗಿಸಲಾಗಿದೆ. ಇದಲ್ಲದೆ, ಹೊಸ ಬಸ್ ನಿಲ್ದಾಣ ಮತ್ತು ಹಳೆಯ ಬಸ್ ನಿಲ್ದಾಣದ ನಡುವೆ 30 ಸುತ್ತುಗಳನ್ನೊಳಗೊಂಡ 2 ಪ್ರತ್ಯೇಕ ಬಸ್ಸುಗಳನ್ನು ಪ್ರಯಾಣಿಕರ ಅನುಕೂಲಕ್ಕಾಗಿ ಕಾರ್ಯಚರಣೆಗೆ ಒಳಪಡಿಸಲಾಗುತ್ತಿದೆ.

ಆ. ಹೌದು

ಇ. ಮೇಲೆ (ಅ) ಕ್ಕೆ ನೀಡಿರುವ ಉತ್ತರದಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಪ್ರಕಟಣೆ

ಅಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಗಳವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 114ರ ಮೇರೆಗೆ ವಿಧಾನ ಸಭೆಯಿಂದ ಅಂಗೀಕಾರವಾದ, 1995ನೇ ಸಾಲಿನ ಕರ್ನಾಟಕ ವಿದ್ಯುತ್ ಸರಬರಾಜು ಉದ್ಯಮಗಳ (ಅರ್ಜನೆ) (ತಿದ್ದುಪಡಿ) ವಿಧೇಯಕವು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ : 5-4-95ರಯ ಅನುಮೋದಿಸಲ್ಪಟ್ಟಿದೆ ಎಂದು ತಿಳಿಸುತ್ತೇನೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 115ರ ಮೇರೆಗೆ ವಿಧಾನ ಸಭೆಯಿಂದ ಅಂಗೀಕೃತವಾದ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ 1995ನ್ನು, ಕರ್ನಾಟಕ ವಿಧಾನ ಪರಿಷತ್ತಿನಲ್ಲಿ, 5-4-95ರಂದು ತಿರಸ್ಕರಿಸಲಾಯಿತೆಂದು ತಿಳಿಸುತ್ತೇನೆ.

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಸಭೆಯ ಮುಂದಿಡಸಲಾದ ಕಾಗದ ಪತ್ರಗಳ ಪಟ್ಟಿ

ಶ್ರೀ ಎಂ.ಸಿ.ನಾಣಯ್ಯ : (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

I ಮುಖ್ಯ ಮಂತ್ರಿಗಳ ಪರವಾಗಿ ಶ್ರೀ ಎಂ. ಸಿ. ನಾಣಯ್ಯ (ಕಾನೂನು ಸಚಿವರು) 1978ನೇ ಇಸವಿಯ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ 8(3) ಉಪ ಅನುಚ್ಛೇದದ 1ನೇ ಕಲಮಿನ ಮೇರೆಗೆ

ಕರ್ನಾಟಕ ರಾಜ್ಯ ಅರಣ್ಯ ಇಲಾಖೆಯ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು 994ಕ್ಕೆ ತಿದ್ದುಪಡಿ ಮಾಡುವ ಸಂಬಂಧದಲ್ಲಿ ದಿನಾಂಕ 31ನೇ ಜನವರಿ 1995ರಂದು ಹೊರಡಿಸಲಾದ ಸಿಆಸುಇ 29 ಸೇನಿಇ 94ನೇ ಕ್ರಮಾಂಕದ ಅಧಿಸೂಚನೆಯನ್ನು ಮಂಡಿಸುತ್ತೇನೆ.

II ಶ್ರೀ ಜೆ.ಹೆಚ್.ಪಟೀಲ್ (ಉಪ ಮುಖ್ಯ ಮಂತ್ರಿ) ಮಾನ್ಯ ಸಭಾಪತಿಯವರೆ,